# ಬೆಳಕಿನ ಸಂಚಲನ

ಸಂ 2, ಸಂ 11 ಮಾರ್ಚ್ 2015

## ಒಂದು ಸಂದೇಶ

**ಗುರೂಜಿ ಕೃಷ್ಣಾನಂದ**

**ಅನು: ಶ್ರೀದೇವಿ**

(ಅವರ ಭಾಷಣದ ಆಯ್ದ ಭಾಗಗಳು)

"ನಾವು ಏಕೆ ಬೆಳಕಿನ ಬಗ್ಗೆ ಈಗ ಮಾತನಾಡುತ್ತಿದ್ದೇವೆ? ಇಷ್ಟು ದಿನ ಅದರ ಬಗ್ಗೆ ಮಾತನಾಡಲಿಲ್ಲ" ಎಂದು ಕೆಲವರು ಕೇಳುತ್ತಿದ್ದಾರೆ. ಕಾರಣ ಬಹಳ ಸರಳ. ಕಳೆದ 5000 ವರ್ಷಗಳ ಅವಧಿಯು ಕತ್ತಲ ಯುಗ ಅಥವಾ ಕಲಿಯುಗವಾಗಿತ್ತು. ಈ ಅವಧಿಯಲ್ಲಿ ಬೆಳಕಿಗೆ ಅವಕಾಶವಿರಲಿಲ್ಲ. ಅಂಧಕಾರಕ್ಕೆ ಅವಕಾಶವಿತ್ತು. ಅದು ಒಂದು ಕಾರಣ.

ಮತ್ತೊಂದು ಕಾರಣವೆಂದರೆ, ಈಗ ನಾವು ಬೆಳಕಿನ ಯುಗಕ್ಕೆ ಕಾಲಿಡುತ್ತಿದ್ದೇವೆ. ಸಹಜವಾಗಿಯೇ ನಾವು ಬೆಳಕಿನ ಬಗ್ಗೆ ತಿಳಿದುಕೊಳ್ಳಬೇಕಾಗಿದೆ. ನಾವು ಬೆಳಕನ್ನು ಅನುಭವಿಸಬೇಕಾಗಿದೆ ಹಾಗೂ ಹರಡಬೇಕಾಗಿದೆ. ಜನರು ಈಗ ಬೆಳಕಿನಲ್ಲಿರುವ ಹೊಸ ಚೇತನಗಳಿಗೆ ಎಚ್ಚೆತ್ತುಕೊಳ್ಳುತ್ತಿದ್ದಾರೆ; ಬೆಳಕನ್ನು ಸುಲಭವಾಗಿ ಅರ್ಥಮಾಡಿಕೊಳ್ಳುತ್ತಿದ್ದಾರೆ ಹಾಗೂ ಬೆಳಕನ್ನು ಚಾನಲ್ ಮಾಡುತ್ತಾರೆ. ಮುಂಚೆ ಇದು ಸಾಧ್ಯವಾಗುತ್ತಿರಲಿಲ್ಲ. ಆದ ಕಾರಣ ನಾವು ಬೆಳಕಿನ ಬಗ್ಗೆ ಮಾತನಾಡಲಿಲ್ಲ.

## ಘಟನಾವಳಿಗಳು

**ಜಯಂತ್ ದೇಶ್‌ಪಾಂಡೆ; ಅನು: ಶ್ರೀದೇವಿ**

ಒಂದು ಸಲ ಬೆಳಕನ್ನು ಚಾನಲ್ ಮಾಡುವುದು ಒಳ್ಳೆಯದು ಆದರೆ ನಮ್ಮ ಶಾರೀರಕ ವ್ಯವಸ್ಥೆಯನ್ನು ಶುದ್ಧಿಗೊಳಿಸಲು, ನಮ್ಮ ಆಲೋಚನೆ ಹಾಗೂ ಭಾವನೆಗಳ ಗುಣಮಟ್ಟವನ್ನು ಉತ್ತಮಪಡಿಸಿಕೊಳ್ಳಲು ನಾವು ಪ್ರತಿ ದಿನ ಬೆಳಕನ್ನು ಚಾನಲ್ ಮಾಡಬೇಕು. ಪ್ರತಿಯೊಂದು ರೀತಿಯಲ್ಲೂ ಬೆಳಕು ಸಹಾಯ ಮಾಡುತ್ತದೆ.

1240 ಶಾಲೆಗಳ 5 ಲಕ್ಷಕ್ಕೂ ಹೆಚ್ಚು ಮಕ್ಕಳು ಪ್ರತಿದಿನ ಬೆಳಕನ್ನು ಚಾನಲ್ ಮಾಡುತ್ತಾರೆ. ಇದು ವಿದ್ಯಾರ್ಥಿಗಳಿಗೆ ಅವರ ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ಸಹಾಯಮಾಡುವುದು ಮಾತ್ರವಲ್ಲದೆ ಶಾಲೆಗಳ ಸುತ್ತಲಿನ ಪ್ರದೇಶಗಳಿಗೆ, ಅವರ ನಗರಕ್ಕೆ ಹಾಗೂ ಇಡೀ ಪ್ರಪಂಚಕ್ಕೆ ಕ್ರಮೇಣವಾಗಿ ಸಹಾಯ ಮಾಡುತ್ತದೆ.

ನಿಯತವಾಗಿ ಬೆಳಕನ್ನು ಚಾನಲ್ ಮಾಡಲು ಪ್ರಾರಂಭಿಸಿದ ಮೇಲೆ ಮಕ್ಕಳ ನಡವಳಿಕೆಯಲ್ಲಿ ಬದಲಾವಣೆಗಳಾಗಿರುವುದನ್ನು ಗಮನಿಸಿರುವುದಾಗಿ ಅನೇಕ ಶಾಲಾ ಅಧಿಕಾರಿಗಳು ನಮಗೆ ದೃಢಪಡಿಸಿದ್ದಾರೆ. ಅನೇಕರು ತಮ್ಮ ವ್ಯಾಸಂಗದಲ್ಲಿ ಉತ್ತಮವಾದ ಸಾಧನೆ ಮಾಡಲು ಲೈಟ್ ಚಾನಲಿಂಗ್ ಸಹಾಯ ಮಾಡಿರುವುದನ್ನು ಸ್ಮರಿಸಿದ್ದಾರೆ.


ಎಂದಾದರೂಂದು ದಿನ ಈ ಸರಳವಾದ ತಂತ್ರವನ್ನು ಈ ಪ್ರಪಂಚದಲ್ಲಿರುವ ಪ್ರತಿಯೊಬ್ಬರಿಗೂ ತಲುಪಿಸಲು ನಮಗೆ ಸಾಧ್ಯವಾಗುತ್ತದೆ, ಹಾಗೂ ಹೊಸಯುಗವನ್ನು ಬೇಗನೆ ಪ್ರವೇಶಿಸುತ್ತೇವೆ ಎನ್ನುವ ಭರವಸೆ ನನಗಿದೆ.

## ಬೆಳಕಿನ ಕ್ರಿಯಾಶಕ್ತಿ

**ಮನೋಜ್ ಚೋಪ್ರ; ಅನು: ಶ್ರೀದೇವಿ**

ಶಾಲಾ ಮಕ್ಕಳಿಗೆ ಬೆಳಕನ್ನು ಚಾನಲ್ ಮಾಡುವುದನ್ನು ಕಲಿಸಿಕೊಡುವುದರಲ್ಲಿ ನಾವು 5 ವರ್ಷಕ್ಕೂ ಹೆಚ್ಚು ಕಾಲವನ್ನು ಪೂರೈಸಿದ್ದೇವೆ. ಇಷ್ಟು ಕಡಿಮೆ ಸಮಯದಲ್ಲಿ ನಮ್ಮ ಕಾರ್ಯಕರ್ತರು 27 ಲಕ್ಷಕ್ಕೂ ಹೆಚ್ಚು ಮಕ್ಕಳಿಗೆ ಬೆಳಕನ್ನು ಚಾನಲ್ ಮಾಡುವುದನ್ನು ಕಲಿಸಿಕೊಟ್ಟಿದ್ದಾರೆ. ಈ ಕೆಲಸವನ್ನು ಬೇಗನೆ ಹರಡಲು ಬೆಳಕು ನಮಗೆ ಸಹಾಯ ಮಾಡಿದೆ ಹಾಗೂ ಈ ಸರಳ ತಂತ್ರವು ಲಕ್ಷಗಟ್ಟಲೆ ಜನರಿಗೆ ಪ್ರಯೋಜನ ನೀಡಿದೆ. ಅನೇಕ ಜನರು ಬೆಳಕನ್ನು ಅನುಭವಿಸುತ್ತಿದ್ದಾರೆ ಹಾಗೂ ತಮ್ಮ ನಿತ್ಯ ಜೀವನದ ಚಟುವಟಿಕೆಗಳಲ್ಲಿ ಅದನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ.

ಮನುಕುಲದೆಡೆಗೆ ಇರುವ ಪ್ರೀತಿ ಹಾಗೂ ಹೊಸಯುಗದ ಕನಸು, ಈ ಅದ್ಭುತವಾದ ಕೆಲಸವು ಮುಂದುವರೆಯುವಂತೆ ಮಾಡಿವೆ. ಈ ಪ್ರಪಂಚದಲ್ಲಿ ಗಲಭೆ, ಗೊಂದಲ ಹಾಗೂ ಅನ್ಯಾಯಗಳಿದ್ದರೂ ಸಹ ಪ್ರೀತಿ, ಶಾಂತಿ ಮತ್ತು ನ್ಯಾಯದ ಬಗೆಗೆ ಒಂದು ಭರವಸೆಯ ಕಿರಣ ಮೂಡಿದೆ. ಒಂದು ದಿನ ಇಡೀ ಪ್ರಪಂಚವು ಬೆಳಕನ್ನು ಒಪ್ಪಿಕೊಳ್ಳುತ್ತದೆ ಮತ್ತು ಈ ಭೂಮಿಯ ಮೇಲೆ ಸಂಪೂರ್ಣವಾಗಿ ಶಾಂತಿ ನೆಲೆಸುತ್ತದೆ.



## ಗುರೂಜಿ ಕೃಷ್ಣಾನಂದ (1939-2012)

### ಬೆಳಕು

ಇದು ಭೌತಿಕ ಮಟ್ಟದ ಬೆಳಕಲ್ಲ, ಅತ್ಯಂತ ಸೂಕ್ಷ್ಮ ಬೆಳಕು. ಈ ಬೆಳಕು ಎಲ್ಲ ಸೃಷ್ಟಿಯ ಮೂಲ. ಎಲ್ಲ ಸಕ್ರಿಯ ಶಕ್ತಿಗಳ ಮೂಲ. ಪ್ರೀತಿ, ಶಾಂತಿ, ಸತ್ಯ, ವಿವೇಕ ಮತ್ತು ಸಮಸ್ತ ಜೀವರಾಶಿಗಳ ಮೂಲ. ಈ ಬೆಳಕೇ ದೇವರು.

### ಚಾನಲಿಂಗ್

ಬೆಳಕನ್ನು ನಮ್ಮೊಳಗೆ ಪ್ರವೇಶಿಸುವಂತೆ ಉದ್ದೇಶಿಸಿ, ನಂತರ ಇಡೀ ಪ್ರಪಂಚಕ್ಕೆ ಹರಡುವಂತೆ ಮಾಡುವುದೇ ಚಾನಲಿಂಗ್. ನಮ್ಮ ಶರೀರ ಬೆಳಕಿನ ಅತ್ಯುನ್ನತ ತರಂಗಗಳನ್ನು ಸ್ಥೂಲಮಟ್ಟದ ತರಂಗಗಳಾಗಿ ಬದಲಾಯಿಸುತ್ತದೆ.

ಬೆಳಕಿನ ಕಂಪನಗಳು ಎಲ್ಲ ಜೀವಿಗಳನ್ನು ಮತ್ತು ಪ್ರಕೃತಿಯನ್ನು ತಲುಪುತ್ತವೆ. ಅವು ಹೀಲಿಂಗ್ ಚೈತನ್ಯಗಳನ್ನು, ಪ್ರೇಮ, ಶಾಂತಿ ಮತ್ತು ಸಕಾರಾತ್ಮಕತೆಗಳನ್ನು ಹೊಂದಿರುತ್ತವೆ. ಅವು ಪರಿವರ್ತನೆಗೆ ಸಹಾಯ ಮಾಡುತ್ತವೆ. ನಾವು ಉತ್ತಮ ಮಾನವ ಜೀವಿಗಳಾಗುತ್ತೇವೆ. ನಮ್ಮ ಪ್ರಪಂಚ, ಉತ್ತಮ ಪ್ರಪಂಚವಾಗುತ್ತದೆ.

### ತಂತ್ರ

ನಿಮ್ಮ ಮೇಲೆ ಬೆಳಕಿನ ಸಾಗರವಿದೆ ಎಂದು ಕಲ್ಪಿಸಿಕೊಳ್ಳಿ. ಬೆಳಕು ನಿಮ್ಮ ದೇಹದೊಳಕ್ಕೆ ಬಂದು ತುಂಬಿಕೊಂಡಂತೆ ಭಾವಿಸಿ. ನಂತರ ಬೆಳಕಿನಲ್ಲಿರುವ ಪ್ರೇಮ ಮತ್ತು ಶಾಂತಿಗಳನ್ನು ಒಂದು ನಿಮಿಷದವರೆಗೆ ಅನುಭವಿಸಿ. ಆ ಬೆಳಕು ಕ್ರಮೇಣ ನಿಮ್ಮ ಮನೆ, ಸುತ್ತಮುತ್ತಲ ಪ್ರದೇಶ, ದೇಶ ಮತ್ತು ಪ್ರಪಂಚಕ್ಕೆ ಹರಡಿದಂತೆ ಕಲ್ಪಿಸಿಕೊಳ್ಳಿ.

ಇದನ್ನು ಕನಿಷ್ಟ 7 ನಿಮಿಷ ಅಭ್ಯಾಸ ಮಾಡಿ.

### ಲೈಟ್ ಚಾನಲ್ ವಿಶ್ವ ಸಂಚಲನ

ಈ ಸಂಚಲನವನ್ನು ಋಷಿಮಾರ್ಗದ ಸಂಸ್ಥಾಪಕರಾದ ಗುರೂಜಿ ಕೃಷ್ಣಾನಂದರವರು 18-05-2008 ರಂದು ಪ್ರಾರಂಭಿಸಿದರು.

ಈ ಸಂಚಲನವೆಂದರೆ ಬೆಳಕನ್ನು ಪ್ರತಿದಿನ ಏಳು ನಿಮಿಷಗಳವರೆಗೆ ಬೆಳಿಗ್ಗೆ ಏಳುವಾಗ ಅಥವಾ ರಾತ್ರಿ ಮಲಗುವ ಮೊದಲು ನಮ್ಮ ನಮ್ಮ ಸ್ಥಳಗಳಿಂದಲೇ ಚಾನಲ್ ಮಾಡುವುದು.

ಈ ಸಂಚಲನದ ಗುರಿ ಮುಖ್ಯವಾಗಿ ಈ ಭೂಮಿಯ ಮೇಲೆ ಶಾಂತಿಯನ್ನು ತರುವುದು.

### ಸಂಚಲನದ ವೈಶಿಷ್ಟತೆ

- ಬೆಳಕಿನಿಂದ ಏಕತೆ.
- ಇದು ಧಾರ್ಮಿಕ ಚಟುವಟಿಕೆಯಲ್ಲ.
- ವಿಶ್ವಾತ್ಮಕವಾದದ್ದು.
- ಇಲ್ಲಿ ಯಾವುದೇ ಕಟ್ಟುಪಾಡುಗಳಿಲ್ಲ.
- ಇಲ್ಲಿ ಸದಸ್ಯತ್ವವಿಲ್ಲ.
- ಶಾಂತಿ ನೆಲೆಸಲು ಪ್ರತಿಯೊಬ್ಬರೂ ಕೊಡುಗೆಯನ್ನು ಕೊಡಬಹುದು.
- ಇದು ಪ್ರತಿ ವ್ಯಕ್ತಿಗೆ ಮತ್ತು ವಿಶ್ವಕ್ಕೆ ಸಹಾಯಕಾರಿ.
- ಹೊಸಯುಗಕ್ಕೆ ಪ್ರವೇಶಿಸಲು ಇದು ನಮ್ಮನ್ನು ಮತ್ತು ವಿಶ್ವವನ್ನು ಸಿದ್ಧಗೊಳಿಸುತ್ತದೆ.

**ಮಾನಸ ಫೌಂಡೇಶನ್ (ರಿ)**
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು–560077 ಭಾರತ.
ಫೋನ್ : (080) 2846 5280, 99000 75280 (10 AM to 4 PM)
ಇ–ಮೇಲ್ : info@lightagemasters.com info@lightchannels.com
ವೆಬ್‌ಸೈಟ್ : www.lightagemasters.com www.lightchannels.com

## ಲೈಟ್ ಚಾನಲಿಂಗ್ ಕೇಂದ್ರಗಳು

ನಮ್ಮ ಲೈಟ್ ಚಾನಲಿಂಗ್ ಕೇಂದ್ರಗಳಲ್ಲಿ ಸ್ಥಳೀಯರು ಲೈಟ್ ಚಾನಲ್ ಮಾಡಲು ನಿಗದಿಪಡಿಸಿದ ಸಮಯದಲ್ಲಿ ಒಟ್ಟಿಗೆ ಸೇರುತ್ತಾರೆ. ಇದರಲ್ಲಿ ಭಾಗವಹಿಸಲು ಎಲ್ಲರಿಗೂ ಸ್ವಾಗತ. ಯಾವುದೇ ಶುಲ್ಕವಿಲ್ಲ ಹಾಗೂ ಸದಸ್ಯರಾಗಬೇಕಿಲ್ಲ.

**ಬೆಂಗಳೂರು**

ಸೋಮವಾರದಿಂದ ಶುಕ್ರವಾರದವರೆಗೆ
(ಸಂಜೆ 7:00 - 7:15)
ಶ್ರೀ ಸಿದ್ಧಾಶ್ರಮ, 17ನೇ ಅಡ್ಡರಸ್ತೆ,
ಮಲ್ಲೇಶ್ವರಂ
☎ 9084121545 ಶ್ರೀ ಚಂದ್ರಶೇಖರ್

ಸೋಮವಾರ (ಸಂಜೆ 6:30 - 7:00)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮಿ ಬಡಾವಣೆ
☎ 9972111809 ಶ್ರೀಮತಿ ಅಂಜಲಿ ಪಾಟಿಲ್ ಕೆ.

ಬುಧವಾರ (ಸಂಜೆ 6:30 - 7:00)
ಮಾರುತಿ ಮಂದಿರ, ವಿಜಯನಗರ
☎ 9972111809 ಶ್ರೀಮತಿ ಅಂಜಲಿ ಪಾಟಿಲ್ ಕೆ.

ಗುರುವಾರ (ಸಂಜೆ 6:30 - 7:00)
ಮಂಚ್‌ಕಿನ್ಸ್, ನಂ.
890, 38ನೇ ಅಡ್ಡರಸ್ತೆ,
20ನೇ ಮುಖ್ಯರಸ್ತೆ,
4ನೇ 'T' ಬ್ಲಾಕ್, ಜಯನಗರ
☎ 9902025444 ಕಾರ್ತಿಕ್ ಎನ್.

ಶುಕ್ರವಾರ (ಸಂಜೆ 6:30 - 7:00)
'ಸುಮತಿ', ನಂ. 481, 7ನೇ ಅಡ್ಡರಸ್ತೆ,
7ನೇ ಮುಖ್ಯರಸ್ತೆ,
ಜೆ.ಪಿ. ನಗರ 3ನೇ ಹಂತ
☎ 9900110351 ಶ್ರೀ ರಮೇಶ್ ವಿ. ಭೋಸೆಕರ್

ಶನಿವಾರ (ಸಂಜೆ 6:30 - 7:00)
ಬಲಮುರಿ ಮಹಾಗಣಪತಿ,
8ನೇ ಅಡ್ಡರಸ್ತೆ,
ಹೊಯ್ಸಳ ವೃತ್ತದ ಬಳಿ,
ಕೆಂಗೇರಿ ಸೆಟಲೈಟ್ ಟೌನ್
☎ 9972111809 ಶ್ರೀಮತಿ ಅಂಜಲಿ ಪಾಟಿಲ್ ಕೆ.

ಶನಿವಾರ (ಸಂಜೆ 6:00 - 7:00)
ಶಿಕ್ಷಾ ಸಾಗರ್ ಪ್ರೈಮರಿ ಶಾಲೆ, ನಂ. 77,
5ನೇ ಮುಖ್ಯ ರಸ್ತೆ, ಪೋಸ್ಟಲ್ ಕಾಲೋನಿ,
ಸಂಜಯ ನಗರ
☎ 9686571066 ಶ್ರೀ ಸುದೀಪ್ ಜಯರಾಮ್



ಬೆಂಗಳೂರಿನ ಸಾಯಿ ಮಂದಿರ ಯೋಗ ತರಗತಿಯ ಮಕ್ಕಳು ಬೆಳಕನ್ನು ಚಾನಲ್ ಮಾಡುತ್ತಿರುವುದು

## ಪ್ರಮುಖ ಘಟನೆಗಳು

- ಜನವರಿ 30, 2015, ಐದನೇ ವಿಶ್ವ ಚಾನಲ್ಸ್ ದಿನ – ಭಾರತದಾದ್ಯಂತ 2350 ಶಾಲೆಗಳ 11 ಲಕ್ಷಕ್ಕೂ ಹೆಚ್ಚು ಮಕ್ಕಳು ಮತ್ತು ಶಿಕ್ಷಕರು ಲೈಟ್ ಚಾನಲ್ ಮಾಡುವುದರ ಮೂಲಕ ಈ ದಿನವನ್ನು ಯಶಸ್ವಿಗೊಳಿಸಿದರು.
- ಜನವರಿ 31, 2014, ನಾಲ್ಕನೇ ವಿಶ್ವ ಚಾನಲ್ಸ್ ದಿನ – ಭಾರತದಾದ್ಯಂತ 2100 ಶಾಲೆಗಳ 10 ಲಕ್ಷಕ್ಕೂ ಹೆಚ್ಚು ಮಕ್ಕಳು ಮತ್ತು ಶಿಕ್ಷಕರು ಲೈಟ್ ಚಾನಲ್ ಮಾಡುವುದರ ಮೂಲಕ ಈ ದಿನವನ್ನು ಯಶಸ್ವಿಗೊಳಿಸಿದರು.
- ಜೂನ್ 29, 2013 – ಬೆಂಗಳೂರು, ಮೈಸೂರು, ಹೈದ್ರಾಬಾದ್, ಸಾಂಗ್ಲಿಯಲ್ಲಿನ 30 ಶಾಲೆಗಳಲ್ಲಿ ಮತ್ತು ಭಾರತದಾದ್ಯಂತ ಲೈಟ್ ಚಾನಲಿಂಗ್ ಕೇಂದ್ರಗಳಲ್ಲಿ 13,449 ಮಕ್ಕಳು ಲೈಟ್ ಚಾನಲಿಂಗ್ ಮಾಡಿದರು.
- ಫೆಬ್ರವರಿ 1, 2013, ಮೂರನೇ ವಿಶ್ವ ಚಾನಲ್‌ಗಳ ದಿನ – ಭಾರತದಾದ್ಯಂತ 1868 ಶಾಲೆಗಳ ಸುಮಾರು 8.86 ಲಕ್ಷ ಮಕ್ಕಳು ಮತ್ತು ಅಧ್ಯಾಪಕರು ಲೈಟ್ ಚಾನಲ್ ಮಾಡುವುದರ ಮೂಲಕ ಈ ದಿನವನ್ನು ಯಶಸ್ವಿಗೊಳಿಸಿದರು.
- ಮೇ 7, 2012 – ಬೆಂಗಳೂರಿನ ಚೌಡಯ್ಯ ಸ್ಮಾರಕ ಭವನದಲ್ಲಿ ಆಯೋಜಿಸಿದ್ದ ಲೈಟ್ ಚಾನಲ್‌ಗಳ ಸಮಾವೇಶದಲ್ಲಿ ಸುಮಾರು ಒಂದು ಸಾವಿರ ಜನರು ಸೇರಿದ್ದರು. ಪ್ರಪಂಚದಾದ್ಯಂತ ಸಾವಿರಾರು ಜನರು ವೆಬ್‌ಕಾಸ್ಟ್ ಮತ್ತು ಮನೋಸಂಪರ್ಕಗಳ ಮೂಲಕ ತಮ್ಮ ತಮ್ಮ ಸ್ಥಳದಿಂದಲೇ ಭಾಗವಹಿಸಿ 15 ನಿಮಿಷಗಳ ಕಾಲ ಲೈಟ್ ಚಾನಲ್ ಮಾಡಿದರು.
- ಫೆಬ್ರವರಿ 1, 2012, ವಿಶ್ವ ಚಾನಲ್‌ಗಳ ದಿನ – ನೂರಾರು ಶಾಲೆಗಳ 6 ಲಕ್ಷಕ್ಕೂ ಹೆಚ್ಚು ಮಕ್ಕಳು ಲೈಟ್ ಚಾನಲ್ ಮಾಡುವುದರ ಮೂಲಕ ಈ ದಿನವನ್ನು ಯಶಸ್ವಿಗೊಳಿಸಿದರು.
- ಜನವರಿ 18, 2012 – ಬೆಂಗಳೂರು, ಪುಣೆ, ಚೆನ್ನೈ ಮತ್ತು ಮಂಗಳೂರಿನ 11, 570 ಮಕ್ಕಳು 16 ವಿವಿಧ ಸೆಷನ್‌ಗಳಲ್ಲಿ ಲೈಟ್ ಚಾನಲ್ ಮಾಡಿದರು.
- ಫೆಬ್ರವರಿ 1, 2011, ವಿಶ್ವ ಚಾನಲ್‌ಗಳ ದಿನ – 130 ಸ್ವಯಂಸೇವಕರು ಭಾರತದಾದ್ಯಂತ ಸುಮಾರು 600 ಶಾಲೆಗಳಲ್ಲಿನ 4 ಲಕ್ಷಕ್ಕೂ ಹೆಚ್ಚು ಮಕ್ಕಳಿಗೆ ಲೈಟ್ ಚಾನಲಿಂಗ್ ಅಭ್ಯಾಸ ಮಾಡಿಸಿದರು.

## ಶಾಲೆಗಳಲ್ಲಿ ಲೈಟ್ ಚಾನಲಿಂಗ್

| | |
|---|---|
| ಭಾಗವಹಿಸಿದ ಶಾಲೆಗಳ ಸಂಖ್ಯೆ | 4920 |
| ಲೈಟ್ ಚಾನಲ್ ಮಾಡಿರುವ ವಿದ್ಯಾರ್ಥಿಗಳ ಸಂಖ್ಯೆ | 27.07 ಲಕ್ಷ |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ಶಾಲೆಗಳ ಸಂಖ್ಯೆ | 1240 |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ | 5.34 ಲಕ್ಷ |

## ಶಾಲೆಗಳಿಗೊಂದು ಮನವಿ

ನಿಮ್ಮ ಶಾಲೆಯಲ್ಲಿ ಲೈಟ್ ಚಾನಲಿಂಗ್ ಅನ್ನು ಪ್ರತಿನಿತ್ಯದ ಪ್ರಾರ್ಥನಾ ಸಮಯದಲ್ಲಿ ಮಾಡಿಸುವುದರ ಮೂಲಕ ಲೈಟ್ ಚಾನಲ್ಸ್ ವಿಶ್ವ ಸಂಚಲನವನ್ನು ಬಲಗೊಳಿಸಲು ಸಹಾಯ ಮಾಡಿ

## ಕನಸುಗಳು

**ಉಷಾ ಸತೀಶ್ಚಂದ್ರ; ಅನು: ಶ್ರೀದೇವಿ**

ಕನಸುಗಳನ್ನು ನಾವೆಲ್ಲಾ ಪೋಷಿಸುತ್ತೇವೆ. ಕೆಲವು ಕನಸುಗಳು ಮಹತ್ವದ್ದಾಗಿದ್ದರೆ ಮತ್ತನೇಕ ಕನಸುಗಳು ಮಹತ್ವದ್ದಾಗಿರುವುದಿಲ್ಲ. ಆದರೆ ದೂರದ ಕನಸುಗಳೂ ಹಾಗೂ ಅಂತ್ಯವಿಲ್ಲದ ಕನಸುಗಳೂ ಇವೆ. ಒಬ್ಬ ಕನಸುಗಾರ ನೋಡುವವರ ಕಣ್ಣಿಗೆ ಸ್ವಲ್ಪ ಮೂರ್ಖನಂತೆ ಕಾಣಬಹುದು. ಕನಸುಗಳು ನನಸಾಗುವವರೆಗೆ ಕನಸು ಕಾಣುವುದು ಒಂದು ತಾತ್ಕಾಲಿಕ ಪರಿಹಾರ, ಒಂದು ಅಮೂಲ್ಯವಾದ ವೇಳೆ ಹಾಗೂ ಒಂದು ಭರವಸೆಯ ಪೋಷಣೆಯಾಗಿರಬಹುದು. ನಮ್ಮ ಕನಸುಗಳ ಅನ್ವೇಷಣೆಯಲ್ಲಿ ಹಲವು ಕನಸುಗಳನ್ನು ಬೆನ್ನಟ್ಟಿ ಹೋಗುತ್ತೇವೆ. ಬಾಲ್ಯದಲ್ಲಿ ಮಣ್ಣಿನ ಕೋಟೆಗಳನ್ನು, ಯೌವನದಲ್ಲಿ ಗಾಳಿಗೋಪುರಗಳನ್ನು ಹಾಗೂ ವಯಸ್ಕರಾದಾಗ ಇಟ್ಟಿಗೆ ಮತ್ತು ಗಾರೆಯಿಂದ ಮನೆಗಳನ್ನು ಕಟ್ಟುವ ಕನಸು ಕಾಣುತ್ತೇವೆ. ಪ್ರೀತಿ ಮತ್ತು ಶಾಂತಿಯ ಅಡಿಪಾಯದ ಮೇಲೆ ಮನೆಯನ್ನು ನಿರ್ಮಿಸಬೇಕೆನ್ನುವುದನ್ನು ಮನಗಾಣುವುದು ವಿರಳ. ಕೊನೆಗೆ ತೀವ್ರ ದುಃಖಕ್ಕೊಳಗಾದ ವ್ಯಕ್ತಿಗಳಾಗಿ, ಒಡೆದ ಕುಟುಂಬಗಳಾಗಿ, ನಮ್ಮ ದೇಶ ಮತ್ತು ಪ್ರಪಂಚವನ್ನು ಇಂತಹ ಅಸಂಖ್ಯಾತ ಕುಟುಂಬಗಳಿಂದ ತುಂಬುತ್ತೇವೆ.

ಕನಸುಗಳು ಭಗ್ನವಾಗುವುದನ್ನು ಲೆಕ್ಕಿಸದೆ ನಾವು ಹೆಚ್ಚು ಹೆಚ್ಚಾಗಿ ಅವುಗಳನ್ನು ಹೆಣೆಯುವುದನ್ನು ಮುಂದುವರೆಸುತ್ತೇವೆ. ಅತ್ಯಂತ ಸಂತೋಷ ಮತ್ತು ಸ್ವಾತಂತ್ರ್ಯದಲ್ಲಿ ಈ ಪಯಣ ಮುಂದುವರೆಯುತ್ತದೆ. ಇದೊಂದು ತಡೆಯಲಾಗದ ಆಕರ್ಷಣೆ! ಅಂತರ್ಬೋಧೆಯಿಂದ ಕನಸಿನೆಡೆಗೆ ಮತ್ತು ಭರವಸೆಯೆಡೆಗೆ ನಾವು ಸೆಳೆಯಲ್ಪಡುತ್ತೇವೆ. ಇದು ನಮ್ಮ ಜೀವರೇಖೆ! ಲಕ್ಷ್ಯವಿಲ್ಲದೆ, ಪಟ್ಟುಬಿಡದ ಮನೋಭಾವದಿಂದ ಅವುಗಳ ಬೆನ್ನಟ್ಟಿ ಹೋಗುತ್ತೇವೆ. ಪ್ರತಿಕೂಲ ಪರಿಸ್ಥಿತಿಗಳಲ್ಲೂ ಕೂಡ ಕನಸು ಕಾಣುವುದು ಒಂದು ಸುಯೋಗ, ಮುಂದೆ ಸಾಗಲು... ಮುಂದೆ ನಡೆಸಲು... ಹೊಸ ವಿಧಿಗಳನ್ನು ನಮಗೆ ಇಷ್ಟವಾದ ರೀತಿಯಲ್ಲಿ ನಿರ್ಮಿಸಲು ಇದೊಂದು ಅವಕಾಶ.

ಅಂತೆಯೇ, ಈ ಸೃಷ್ಟಿಯಲ್ಲಿ ಪ್ರತಿಯೊಂದಕ್ಕೂ, ಪ್ರಕೃತಿಗೂ ಸಹ ಒಂದು ಕನಸಿದೆ ಎಂದು ನನಗೆ ಅನ್ನಿಸುತ್ತದೆ. ಪ್ರಾಯಶಃ ಪ್ರಕೃತಿ ತನ್ನ ಕನಸುಗಳನ್ನು ಅನೇಕ ಮಾರ್ಗಗಳ ಮೂಲಕ ಸಾಕಾರಗೊಳಿಸಿಕೊಳ್ಳುತ್ತದೆ. ಅದು ಅನೇಕ ರೀತಿಯಲ್ಲಿ ತನ್ನ ಸುತ್ತಮುತ್ತಲಿನ ಪರಿಸರವನ್ನು ನಯವಾಗಿ ತೀಡುತ್ತದೆ, ಮೃದುವಾಗಿ ಪ್ರಭಾವ ಬೀರುತ್ತದೆ ಹಾಗೂ ಹಿತವಾಗಿ ತಟ್ಟುತ್ತದೆ. ವೈವಿಧ್ಯತೆ, ಅಪಾರವಾದ ಸಮೃದ್ಧಿ ಹಾಗೂ ಪ್ರಕೃತಿಯ ದಿವ್ಯವಾದ ಅಭಿವ್ಯಕ್ತಿಯಲ್ಲಿನ ಸೌಂದರ್ಯ ಇದಕ್ಕೆ ಸಾಕ್ಷಿಯಾಗಿದೆ.

ಬೆಳಕು ಮತ್ತು ವಿಶ್ವವು ಕೂಡ ಜೊತೆಯಾಗಿ ಕನಸು ಕಾಣಬಹುದು. ಅದು, ಬಹುಶಃ, ಶುದ್ಧತೆ ಮತ್ತು ಪರಿಪೂರ್ಣತೆಯ ತಮ್ಮದೇ ನೈಜ ಸ್ವರೂಪದ ಪ್ರತಿಬಿಂಬವನ್ನು ಸೃಷ್ಟಿಸಲು ಆಗಿರಬಹುದು. ಆ ಒಂದು ಆಲೋಚನೆಯೇ ಎಷ್ಟೊಂದು ದಿವ್ಯವಾಗಿ ಹಾಗೂ ಪರಿಪೂರ್ಣವಾಗಿ ತೋರುತ್ತದೆ. ಅವರ ಕನಸುಗಳಿಗೆ ನಮ್ಮ ಕನಸುಗಳು ಸಾಟಿಯೇ ಎಂದು ಕೆಲವೊಮ್ಮೆ ಅಂದುಕೊಳ್ಳುತ್ತೇನೆ. ನನ್ನ ಕನಸು ವಿಶ್ವದ ಕನಸಿನ ಜೊತೆ ಶ್ರುತಿಗೊಂಡಿದೆಯೇ? ಸರ್ವಸಮಾನ ಕನಸು ನಮಗಿದೆಯೇ?

ಓ ಹೌದು, ನಮಗಿದೆ. ಅದು ವಿಶ್ವಾತ್ಮಕ! ಒಬ್ಬ ವ್ಯಕ್ತಿ ಅಥವಾ ಒಂದು ಪ್ರಪಂಚ ಶಾಂತಿ, ಪ್ರೀತಿ ಹಾಗೂ ಸಕಾರಾತ್ಮಕತೆಯಿಂದ ತುಂಬಿರುವಂತೆ ಕಾಣುವ ಕನಸು, ಕೇವಲ ಒಬ್ಬ ವ್ಯಕ್ತಿಯ ಕನಸಲ್ಲ, ಅದು ಪ್ರತಿಯೊಬ್ಬರ ಕನಸು. ಒಬ್ಬ ಸ್ನೇಹಿತನಿಂದ ಹಿಡಿದು ಕುಟುಂಬದ ಒಬ್ಬ ಸದಸ್ಯನ ತನಕ ನಮ್ಮ ಸುತ್ತಮುತ್ತಲಿನ ಜನರೆಲ್ಲಾ ಶಾಂತಿಯಿಂದ ಇರದಿದ್ದರೆ ನಾವು ಯಾರೂ ಶಾಂತಿಯಿಂದ ಇರಲು ಸಾಧ್ಯವಿಲ್ಲ. ಅದು ನಾವು ಕೆಲಸ ಮಾಡುವ ಸ್ಥಳದಲ್ಲಾಗಿರಬಹುದು ಅಥವಾ ನೆರೆಹೊರೆಯಲ್ಲಾಗಿರಬಹುದು. ಈ ನಿಟ್ಟಿನೆಡೆಗೆ ಲೈಟ್ ಚಾನಲ್ಸ್ ವಿಶ್ವ ಸಂಚಲನವು, ಒಬ್ಬ ಮಹಾನ್ ಮಾಸ್ಟರ್ ಹಾಗೂ ದಾರ್ಶನಿಕರಾದ ಗುರೂಜಿ ಕೃಷ್ಣಾನಂದರ ಕನಸಾಗಿದೆ. ಲೈಟ್ ಚಾನಲಿಂಗ್, ಆ ಅಸಾಧಾರಣ ದೂರದೃಷ್ಟಿಯ ಕಡೆಗೆ ನಡೆಯಲು ಒಂದು ಮಾರ್ಗದರ್ಶಿ ದೀಪವಾಗಿದೆ. ಶಾಂತಿ ಮತ್ತು ಪ್ರೀತಿ ತುಂಬಿದ ಮನೆಗಳನ್ನು ನಿರ್ಮಿಸುವ ದೂರದೃಷ್ಟಿ ಇದಾಗಿದೆ. ನಂತರ ಇದನ್ನು ಹೆಚ್ಚು ಹೆಚ್ಚು ಜನರಿಗೂ, ಹೆಚ್ಚು ಹೆಚ್ಚು ಮನೆಗಳಿಗೂ ವಿಸ್ತರಿಸುವುದು ಹಾಗೂ ಶಾಂತಿ ಮತ್ತು ಪ್ರೀತಿಯನ್ನು ಮಾತ್ರ ಹೊರಸೂಸುವಂತಹ ಒಂದು ಪ್ರಪಂಚವನ್ನು ಸೃಷ್ಟಿಸುವುದಾಗಿದೆ.

ಈ ಕನಸನ್ನು ಸಾಕಾರಗೊಳಿಸಲು, ಈ ದೂರದೃಷ್ಟಿಯು ಅತಿ ದೊಡ್ಡದಾಯಿತೇ ಅಥವಾ ಸ್ವಲ್ಪ ಮುಂಚಿತವಾಯಿತೇ? ಹಾಗೆ ಅನಿಸುವುದಿಲ್ಲ. ವಿಶ್ವದ ದೂರದೃಷ್ಟಿಯ ಕಡೆಗೆ ನಿಶ್ಚಿತವಾದ ಅಂಬೆಗಾಲು ಇಡಲಾಗಿದೆ. ಶಾಲಾಮಕ್ಕಳು ಮೊದಲ ಹೆಜ್ಜೆ ಇಟ್ಟಿದ್ದಾರೆ. ಆ ಮಗುವು ಬೆಳೆದು ವಯಸ್ಕನಾಗಿ ಇದನ್ನು ಸಾಕಾರಗೊಳಿಸಲು ಮಾರ್ಗದರ್ಶಕನಾಗಿದ್ದಾನೆ. ಈ ಕನಸು ನನಸಾಗಲು ಇದಕ್ಕೆ ನಮ್ಮೆಲ್ಲರಿಂದ ಭಾರಿ ಬೆಂಬಲದ ಅವಶ್ಯಕತೆ ಇದೆ. ಆ ಕನಸಿನೆಡೆಗೆ ದೈತ್ಯ ನಡಿಗೆಯ ಅವಶ್ಯಕತೆಯಿದೆ. ವೈಯಕ್ತಿಕವಾಗಿ ಪ್ರತಿಯೊಬ್ಬರೂ–ಮಗುವಾಗಿರಲಿ ಅಥವಾ ವಯಸ್ಕನಾಗಿರಲಿ, ಶಾಂತಿ ಮತ್ತು ಪ್ರೀತಿಯನ್ನು ಸದಾ ಕಾಲ ಹೊರಸೂಸಬೇಕಾಗಿದೆ. ಹೆಚ್ಚಿನ ಜನರು ಹೀಗೆ ಮಾಡಲು ಇಚ್ಛಿಸಿದರೆ, ಸಹಜವಾಗಿ ಈ ಭೂಮಿಯ ಮೇಲೆ ಭವ್ಯವಾದ ಸಂಭ್ರಮಾಚರಣೆಯನ್ನು ಕಾಣುತ್ತೇವೆ. ನಮ್ಮ ವಿಶಾಲ ಮನೆಯಾದ ಈ ಭೂಮಿಯು, ಶಾಂತಿ ಮತ್ತು ಪ್ರೀತಿಯನ್ನು ಮಾತ್ರ ಹರಡಿದರೆ ಆ ಕನಸು ಸಾಕಾರಗೊಂಡಂತಾಗಬಹುದು. ಅದು ದಿವ್ಯತೆಯ ಅಭಿವ್ಯಕ್ತಿ, ದಿವ್ಯ ಸ್ಥಿತಿಯ ಪ್ರತಿಬಿಂಬ!

ಪ್ರತಿ ಕ್ಷಣ, ಪ್ರತಿ ದಿನ ನಮ್ಮನ್ನು ಹಾಗೂ ಈ ಪ್ರಪಂಚವನ್ನು ಶಾಂತಿ ಮತ್ತು ಪ್ರೀತಿಯಿಂದ ತುಂಬಲು ಇದೊಂದು ಅವಕಾಶ. ದುಃಸ್ವಪ್ನಗಳಿಂದ ಮುಕ್ತಿ ಹೊಂದಿ ಶಾಂತಿಯುತವಾದ ಕನಸುಗಳನ್ನು ಪೋಷಿಸಲು ಇದೊಂದು ನಿಜವಾದ ಅವಕಾಶ. ಚಿಕ್ಕವಳಿದ್ದಾಗ ನನ್ನ ಪುಸ್ತಕದಲ್ಲಿ ಗೀಚಿದ ಒಂದು ಸಣ್ಣ ಟಿಪ್ಪಣಿಯನ್ನು ನೆನಪಿಸಿಕೊಳ್ಳುತ್ತೇನೆ – 'ದೊಡ್ಡದಾಗಿ ಕನಸುಕಾಣು'. ■

## ಲೈಟ್ ಚಾನಲಿಂಗ್ ಕೇಂದ್ರಗಳು

ಶನಿವಾರ (ಸಂಜೆ 7:30 - 8:30)
ಗುರುದ್ವಾರ ಸಾಹಿಬ್,
ಆಂಜನೇಯ ದೇವಸ್ಥಾನದ ಎದುರು,
ಅಶ್ವತ್ಥ ನಗರ ಮುಖ್ಯ ರಸ್ತೆ, ಸಂಜಯ ನಗರ
☎ 9686571066 ಶ್ರೀ ಸುದೀಪ್ ಜಯರಾಮ್

### ಸೋಲಾಪೂರ್

ಪ್ರತಿದಿನ (ಸಂಜೆ 7:00 - 7:30)
ಬಾಲಗಣೇಶ್ ಮಂದಿರ, ಬುಶರ್ ಪೇಠ್,
ಮೊಹೋಲ್
☎ 09860967066, ಶ್ರೀ ವಿವೇಕಾನಂದ ಸ್ವಾಮಿ
☎ 09970800279, ಶ್ರೀಮತಿ ಸ್ವರೂಪ ಸ್ವಾಮಿ

### ಚೆನ್ನೈ

ಭಾನುವಾರ (ಬೆಳಿಗ್ಗೆ 10:00 -10:30)
ನಂ. 481, ಸಾಯಿಪ್ರೇಮ್, 19 ನೇ ರಸ್ತೆ,
4ನೇ ಸೆಕ್ಟರ್, ಕೆ.ಕೆ. ನಗರ
☎ 9444880409, ಶ್ರೀಮತಿ ರಾಜಲಕ್ಷ್ಮಿ ಆರ್.

### ಪುಣೆ

ಶನಿವಾರ (ಸಂಜೆ 6:30 - 7:00)
3 B, ಕಪಿಲ ಹೌಸಿಂಗ್ ಸೊಸೈಟಿ,
ಗೋಖಲೆನಗರ, ಪುಣೆ - 411016
☎ 9011038169, ಶ್ರೀ ಆಶುತೋಶ್ ನವನ್‌ಗುಲ್


ಗುರುವಾರ (ಮಧ್ಯಾಹ್ನ 2:30 - 3:00)
ಸಿಂಧಿ ಮಂದಿರ, ಸತ್ನಮ್ ಟೆಕ್ಸ್‌ಟೈಲ್ ಪಕ್ಕ,
ಶಿವಸೇನ ಕಛೇರಿಯ ಸಮೀಪ, ಉರುಲಿ ಕಾಂಚನ್,
ಹವೇಲಿ ಜಿಲ್ಲೆ, ಪುಣೆ - 412202
☎ 9822973632, ಶ್ರೀ ಗೋರಕ್ಷ್ ಮಹಾದಿಕ್

### ವಿಶಾಖಪಟ್ಟಣ

ಶನಿವಾರ (ಸಂಜೆ 7:00 - 7:30)
ಮನೆ ನಂ. 14-339/19, ಫ್ಲಾಟ್ ನಂ. 207,
ಶ್ರೀ ಮಿತ್ರ ಹೈಟ್ಸ್, ಬಾಲಾಜಿ ಗಾರ್ಡನ್,
ಗೋಪಾಲಪಟ್ನಂ, APRTC ಬಸ್ ಡಿಪೋ ಎದುರು
☎ 9848628324, ಶ್ರೀ ವಿ. ಹರಿಕೃಷ್ಣನ್

### ಮೀರಜ್

ಗುರುವಾರ (ಸಂಜೆ 7:45)
ಶ್ರೀ ಶಿವರುದ್ರ ಬಿ. ಬೆಲಗನ್ವಿ
C/o. ಶ್ರೀ ಸ್ವಾಮಿ ಸಮರ್ಥ ಸೇವಾ ಕೇಂದ್ರ
A-gat Plot No-135, ಸುಭಾಷ್ ನಗರ ಪೋಸ್ಟ್
☎ 9822421463, ಶ್ರೀ ಮಹಾಜನ್



## ಅನುಭವಗಳು

**ಸಂ: ವೈಶಾಲಿ ಜೋಶಿ; ಅನು: ಪಾಂಡುರಂಗ**

ಲೈಟ್ ಚಾನಲ್ ಮಾಡುವಾಗ ನಾನು ಸಂತೋಷ ಮತ್ತು ಸಮಾಧಾನದಿಂದ ಇದ್ದೆ ಹಾಗೂ ಈ ಪ್ರಪಂಚದ ಹೊರಗೆ ಇದ್ದೆ. ಒಂದು ಸುಂದರವಾದ ಮರದ ಕೆಳಗೆ ಕುಳಿತಿರುವಂತೆ ಭಾಸವಾಯಿತು. ನನ್ನ ಸುತ್ತಲೂ ಹಸಿರು ಮತ್ತು ನೀಲಿ ಗುಲಾಬಿಗಳಿದ್ದವು. ಮಧುರವಾದ ಗಾಳಿ ಮತ್ತು ಬೆಳಕು ನನಗೆ ಪ್ರಿಯವಾಯಿತು. ಇಂಥಹ ಅನುಭವವನ್ನು ನೀಡಿದ ನಿಮಗೆ ವಂದನೆಗಳು.

– ಸೆಹ್‌ಬಾ ತಲತ್, 6ನೇ ತರಗತಿ,
ಮದ್ರಸಾ–ಇ–ಜ್ಞೀಯಾನ್ಸ್, ಬೆಂಗಳೂರು

ಬಿಳಿ ಬೆಳಕಿನ ಸಾಗರವೊಂದನ್ನು ಊಹಿಸಿ ಕೊಳ್ಳಲು ನೀವು ಹೇಳಿದಾಗ, ಅದು ಬೃಹದಾಕಾರವಾಗಿತ್ತು ಮತ್ತು ಅದರಲ್ಲಿ ಭಗವಂತನಿದ್ದ. ನಾನು ಭಗವಂತನನ್ನು ನೋಡಿದೆ!

– ವಿದ್ಯಾರ್ಥಿ, 3ನೇ ತರಗತಿ,
ಕಂಟೋನ್‌ಮೆಂಟ್ ಬೋರ್ಡ್ ಸ್ಕೂಲ್,
ಮೆಹರಮ್ ನಗರ

ಏನೇ ಬರಲಿ ನಾನು ಪ್ರತಿದಿನ ಲೈಟ್ ಚಾನಲ್ ಮಾಡುತ್ತೇನೆ. ಅದು ನನಗೆ ಪ್ರತಿಯೊಂದರಲ್ಲೂ ಬದಲಾವಣೆ ತಂದಿದೆ. ಅದರಿಂದಾಗಿ ನನಗೆ ಯಾವ ಯೋಚನೆಯೂ ಇಲ್ಲ. ಅದು ಎಲ್ಲವನ್ನೂ ನೋಡಿಕೊಳ್ಳುತ್ತದೆ. ಒಮ್ಮೆ ಒಬ್ಬ ವಿದ್ಯಾರ್ಥಿ ಕಳೆದು ಹೋದ. ಅವನ ತಂದೆ ತಾಯಿ ಮತ್ತು ನಾವು ಆತಂಕಕ್ಕೆ ಒಳಗಾಗಿದ್ದೆವು. ನಾನು ಕೆಲವು ನಿಮಿಷಗಳವರೆಗೆ ಲೈಟ್ ಚಾನಲ್ ಮಾಡಿದೆ. ನಮಗೆ ಅವನು ಸಿಕ್ಕಿದ! ನಾನು ಏನೇ ಬಯಸಿದರೂ ಬೆಳಕು ಅದನ್ನು ಕೊಡುತ್ತದೆ!

– ವೀಣಾ ಭಾರದ್ವಾಜ್, ಮುಖ್ಯೋಪಾಧ್ಯಾಯರು,
ಕಂಟೋನ್‌ಮೆಂಟ್ ಬೋರ್ಡ್ ಸ್ಕೂಲ್,
ಸದರ್ ಬಜಾರ್

ನಾನು ಯಾವಾಗಲೂ ಗೊಂದಲಗೊಳ್ಳುತ್ತಿದ್ದೆ ಮತ್ತು ಬಹಳ ಖಿನ್ನತೆಗೆ ಒಳಗಾಗುತ್ತಿದ್ದೆ. ನನ್ನ ಬಗ್ಗೆ ಯಾವಾಗಲೂ ನಕಾರಾತ್ಮಕ ಭಾವನೆಗಳನ್ನು ಹೊಂದಿದ್ದೆ. ಇದರಿಂದ ನಾನು ಯಾವಾಗಲೂ ದು:ಖಿತಳಾಗಿರುತ್ತಿದ್ದೆ. ನನ್ನ ಭಾವನೆಗಳನ್ನು ಹಂಚಿಕೊಳ್ಳಲು ನನಗೆ ಆಪ್ತ ಸ್ನೇಹಿತರಾರೂ ಇರಲಿಲ್ಲ. ಬೇರೊಬ್ಬರ ಜೊತೆ ನನ್ನ ಭಾವನೆಗಳನ್ನು ವ್ಯಕ್ತಪಡಿಸಲು ನನಗೆ ಇಷ್ಟವೂ ಆಗುತ್ತಿರಲಿಲ್ಲ. ಒಂದು ದಿನ ಅಶ್ವಿನಿ ಮೇಡಮ್ ನನಗೆ ಲೈಟ್ ಚಾನಲಿಂಗ್‌ಅನ್ನು ಪರಿಚಯಿಸಿದರು. ಕಳೆದ ಎರಡು ತಿಂಗಳುಗಳಿಂದ ನಾನು ಲೈಟ್ ಚಾನಲ್ ಮಾಡುತ್ತಿದ್ದೇನೆ. ನಾನು ಕಣ್ಣು ಮುಚ್ಚಿ ಲೈಟ್ ಚಾನಲಿಂಗ್ ಮಾಡುವಾಗ, ನಿಜವಾಗಿಯೂ ಬೆಳಕು ನನ್ನ ದೇಹದೊಳಗೆ ಪ್ರವೇಶಿಸಿದಂತೆ ಭಾಸವಾಗುತ್ತದೆ. ಆ ಮೂರು ನಿಮಿಷಗಳ ನಂತರ ನನಗೆ ಬಹಳ ಶಾಂತಿ, ಸಮಾಧಾನ, ಉಲ್ಲಾಸ ಮತ್ತು ಒತ್ತಡಗಳಿಂದ ಮುಕ್ತಳಾದ ಅನುಭವವಾಗುತ್ತದೆ ಹಾಗೂ ಆ ದಿನದ ಆಗುಹೋಗುಗಳನ್ನು ಎದುರಿಸಲು ಸಿದ್ಧಳಾಗುತ್ತೇನೆ. ಬೆಳಕಿನ ಜೊತೆಗೆ ನನ್ನ ಎಲ್ಲ ಭಾವನೆಗಳನ್ನು ಹಂಚಿಕೊಳ್ಳುತ್ತಿದ್ದೇನೆ. ನನ್ನ ಕನಸುಗಳು ನನಸಾಗುತ್ತಿವೆ ಎಂದು ಅನಿಸುತ್ತಿದೆ. ಬೆಳಕು ಅಸಾಧ್ಯವಾದುದನ್ನು ಸಾಧ್ಯವಾಗಿಸುವ ಶಕ್ತಿಯನ್ನು ಪಡೆದಿದೆಯೆಂದು ನನಗೆ ಅನ್ನಿಸುತ್ತದೆ. ಅದು ನನ್ನಲ್ಲಿ ಒಂದು ದೊಡ್ಡ ಬದಲಾವಣೆಯನ್ನು ತಂದಿದೆ. ಈಗ ನನ್ನನ್ನು ನಾನು ಹೆಚ್ಚಾಗಿ ಪ್ರೀತಿಸುತ್ತಿದ್ದೇನೆ. ಪ್ರತಿದಿನ ನನ್ನಲ್ಲಿ ಹೊಸ ಭರವಸೆ ಮೂಡುತ್ತದೆ. ನಾನು ಈಗ ತುಂಬಾ ಸಂತೋಷದಿಂದ, ಸಕಾರಾತ್ಮಕವಾಗಿ ಇರುತ್ತೇನೆ. ಪ್ರತಿದಿನ ನಾನು ನಗುಮುಖದಿಂದ ಇರುತ್ತೇನೆ. ಯಾವುದೇ ಚಿಂತೆಗಳು ನನಗಿಲ್ಲ. ನಾನು ತುಂಬಾ ಉಲ್ಲಾಸ, ಉತ್ಸಾಹ ಹಾಗೂ ಚೈತನ್ಯದಿಂದಿರುತ್ತೇನೆ. ಇದು ಅದ್ಭುತವಾದ ಅನುಭವ. ಲೈಟ್ ಚಾನಲ್ ಮಾಡುವುದನ್ನು ಬಹಳ ಇಷ್ಟಪಡುತ್ತೇನೆ. ಒಂದು ದಿನವೂ ಲೈಟ್ ಚಾನಲ್ ಮಾಡುವುದನ್ನು ತಪ್ಪಿಸಲಾರೆ. ಈ ತಂತ್ರವನ್ನು ಕಲಿಸಿಕೊಟ್ಟಿದ್ದಕ್ಕಾಗಿ ನನ್ನ ವಂದನೆಗಳು.

– ಫರ್ನಾಜ್ ಬಾನು, ಲೈಟ್ ಚಾನಲ್

ಲೈಟ್ ಚಾನಲಿಂಗ್ ಸೆಷನ್ ನಡೆಸುವುದಕ್ಕಾಗಿ ಅನುಮತಿ ಪಡೆಯಲು ನಾನು ಒಂದು ಶಾಲೆಗೆ ಹೋಗಿದ್ದೆ. ಆದರೆ ಮುಖ್ಯೋಪಾಧ್ಯಾಯರು ಸಂಶಯ ಮನೋಭಾವದವರಾಗಿದ್ದು, ಬೆಳಕಿನ ಬಗ್ಗೆ ನನ್ನ ವಿವರಣೆಯನ್ನಾಗಲಿ ಅಥವಾ ನನಗೆ ಒಂದು ಅವಕಾಶವನ್ನು ಕೊಡಬೇಕೆನ್ನುವ ನನ್ನ ಕೋರಿಕೆಯನ್ನಾಗಲಿ ಕೇಳುವ ಮನಸ್ಥಿತಿಯಲ್ಲಿ ಇರಲಿಲ್ಲ. ನಾನು ಶಾಲೆಯ ಹೊರಗೆ ಕುಳಿತು ಲೈಟ್ ಚಾನಲ್ ಮಾಡಿ, ನನಗೆ ಸಹಾಯ ಮಾಡಿರೆಂದು ಬೆಳಕು ಮತ್ತು ಋಷಿಗಳನ್ನು ಪ್ರಾರ್ಥಿಸಿದೆ. ಎರಡು ದಿನಗಳ ನಂತರ ಆ ಶಾಲೆಯಿಂದ ನನಗೆ ಕರೆ ಬಂತು. ಅವರ ಶಾಲೆಯ ಪ್ರಾರ್ಥನಾ ಸಮಯದಲ್ಲಿ ಲೈಟ್ ಚಾನಲಿಂಗ್ ಸೆಷನ್ ನಡೆಸಿಕೊಡಬೇಕೆಂದು ಕೇಳಿದರು. ಅದರಂತೆ ಲೈಟ್ ಚಾನಲಿಂಗ್ ಸೆಷನ್ ಮುಗಿದ ನಂತರ, ಈ ಶಾಲೆಗೆ ಇಂಥಹ ಅಭ್ಯಾಸದ ಅವಶ್ಯಕತೆ ಇತ್ತು ಎಂದು ಮುಖ್ಯೋಪಾಧ್ಯಾಯರು ತಿಳಿಸಿದರು ಮತ್ತು ಪ್ರತಿದಿನ ಈ ಅಭ್ಯಾಸವನ್ನು ಮಾಡುತ್ತೇವೆ ಎಂದು ಭರವಸೆ ನೀಡಿದರು. ಜೊತೆಗೆ, 10ನೇ ಮತ್ತು 12ನೇ ತರಗತಿಯ ವಿದ್ಯಾರ್ಥಿಗಳಿಗೆ ಹಾಗೂ ಉಪಾಧ್ಯಾಯರುಗಳಿಗೆ ವಿಶೇಷವಾಗಿ ಲೈಟ್ ಚಾನಲಿಂಗ್ ಸೆಷನ್ ನಡೆಸಬೇಕೆಂದು ಕೇಳಿದರು! ಮತ್ತೊಮ್ಮೆ ಬೆಳಕು ಪವಾಡವನ್ನು ಸೃಷ್ಟಿಸಿ ಜನರ ಹೃದಯಗಳಲ್ಲಿ ಬದಲಾವಣೆ ತಂದಿತು!!

– ನಿತ್ಯಾ ಜೇಮ್ಸ್, ಕಾರ್ಯಕರ್ತೆ

ಬೆಳಕಿನ ಸಂಚಲನ ಕನ್ನಡ ಮಾಸಪತ್ರಿಕೆ, ಖಾಸಗಿ ಪ್ರಸಾರಕ್ಕಾಗಿ ಮಾತ್ರ ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು: ಶ್ರೀದೇವಿ (ಮಾನಸ ಫೌಂಡೇಶನ್ (ರಿ) ಪರವಾಗಿ)
ಪ್ರಕಾಶನ ಸ್ಥಳ: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು– 560077
ಮುದ್ರಣ ಸ್ಥಳ : ಗುಡ್ ಪ್ರಿಂಟ್ಸ್, ವೀಣ ಕಾಂಪ್ಲೆಕ್ಸ್, ಹಳೇ ಮದ್ರಾಸ್ ರಸ್ತೆ, ದೂರವಾಣಿನಗರ, ಬೆಂಗಳೂರು – 560 016
ಮಾಲೀಕರು : ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು – 560077 ಸಂಪಾದಕರು: ಶ್ರೀದೇವಿ